# ಕರ್ನಾಟಕ ವಿಧಾನ ಮಂಡಲ (ಏಕಕಾಲೀನ ಸದಸ್ಯತ್ವ ನಿಷೇಧ) ಅಧಿನಿಯಮ, 1956

(ಕರ್ನಾಟಕ ರಾಜ್ಯಪತ್ರ ಗುರುವಾರ, ಜೂನ್ 26, 2003, ಭಾಗ 4–ಎ, ಪುಟ ಸಂಖ್ಯೆ 577–578 ರಲ್ಲಿ ಪ್ರಕಟಿತವಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು**

1. ಚಿಕ್ಕ ಹೆಸರು
2. ಪರಿಭಾಷೆಗಳು
3. ವಿಧಾನಸಭೆ ಮತ್ತು ವಿಧಾನ ಪರಿಷತ್ತು – ಈ ಎರಡಕ್ಕೂ ಸದಸ್ಯರಾಗಿ ಚುನಾಯಿತರಾದಾಗ, ವ್ಯಕ್ತಿಗಳು, ಒಂದು ಸ್ಥಾನವನ್ನು ಖಾಲಿಮಾಡುವುದು
4. ಒಂದು ಸದನದಲ್ಲಿ ಈಗಾಗಲೇ ಸದಸ್ಯರಾಗಿರುವ ವ್ಯಕ್ತಿಗಳು ಇನ್ನೊಂದು ಸದನಕ್ಕೆ ಚುನಾಯಿತರಾದ ಮೇಲೆ ಒಂದು ಸ್ಥಾನವನ್ನು ಖಾಲಿಮಾಡುವುದು

## ಉದ್ದೇಶ ಮತ್ತು ಕಾರಣಗಳ ಹೇಳಿಕೆ

**1957ರ ಅಧಿನಿಯಮ 3.–** ಸಂವಿಧಾನದ 190ನೇ ಅನುಚ್ಛೇದದ (1)ನೇ ಖಂಡವು, ಯಾರೇ ವ್ಯಕ್ತಿಯು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಸದಸ್ಯನಾಗಿರತಕ್ಕದ್ದಲ್ಲವೆಂದು ಉಪಬಂಧಿಸುತ್ತದೆ ಮತ್ತು ಯಾರೇ ವ್ಯಕ್ತಿಯು ಉಭಯ ಸದನಗಳ ಸದಸ್ಯನಾಗಿ ಆಯ್ಕೆಯಾದರೆ, ಅವನು ಉಭಯ ಸದನಗಳಲ್ಲಿ ಯಾವುದಾದರೂ ಒಂದು ಸದನದ ತನ್ನ ಸ್ಥಾನವನ್ನು ಖಾಲಿ ಮಾಡುವಂತೆ ಆ ರಾಜ್ಯದ ವಿಧಾನಮಂಡಲವು ಕಾನೂನಿನ ಮೂಲಕ ಉಪಬಂಧವನ್ನು ಮಾಡತಕ್ಕದ್ದು. ಹಳೆಯ ಮೈಸೂರು ವಿಧಾನ ಮಂಡಲದಿಂದ ಅಂಗೀಕರಿಸಲ್ಪಟ್ಟ ಮೈಸೂರು ವಿಧಾನಮಂಡಲ (ಏಕಕಾಲೀನ ಸದಸ್ಯತ್ವ ನಿಷೇಧ) ಅಧಿನಿಯಮ, 1951 ಹೊಸ ರಾಜ್ಯಕ್ಕೆ ಅನ್ವಯವಾಗದಿರುವುದರಿಂದ ಮತ್ತು 190ನೇ ಅನುಚ್ಛೇದದ (1)ನೇ ಖಂಡದ ಮೂಲಕ, ರಾಜ್ಯ ವಿಧಾನಮಂಡಲದ ಮೇಲೆ ಹೊರಿಸಲಾದ ಕರ್ತವ್ಯವನ್ನು ಅನುಷ್ಠಾನಗೊಳಿಸುವುದು ಅವಶ್ಯವಾಗಿರುವುದರಿಂದ, ವಿಧೇಯಕ ತರುವ ಅಗತ್ಯತೆ ಉಂಟಾಗಿದೆ. ವಿಧಾನ ಮಂಡಲಕ್ಕೆ ಅಥವಾ ವಿಧಾನ ಪರಿಷತ್ತಿಗೆ ಇವುಗಳಲ್ಲಿ ಯಾವುದೇ ಒಂದಕ್ಕಾಗಲೀ ಅವುಗಳು ಪುನರ್ ರಚನೆ ಆಗುವವರೆಗೆ ಉಪ ಚುನಾವಣೆ ನಡೆಯದಿದ್ದರೆ ಆ ಚುನಾವಣೆ ನಡೆಯುವವರೆಗೂ ಅಂಥ ಕಾನೂನು ರಚಿಸುವ ಅವಶ್ಯಕತೆ ಇರುವುದಿಲ್ಲ. ಆದರೆ. ವ್ಯಕ್ತಿಗಳು ಉಭಯ ಸದನಗಳ ಚುನಾವಣೆಗೆ ಸ್ಪರ್ಧಿಸುವ ಸಂದರ್ಭ ಉಂಟಾಗಬಹುದೆಂದು, ಮುಂದಿನ ಚುನಾವಣೆಗಳ ಮುಂದೆಯೇ ಕಾನೂನನ್ನು ಅಧಿನಿಯಮಿತಗೊಳಿಸಬೇಕಾಗುತ್ತದೆ ಮತ್ತು ಸಂವಿಧಾನದ 190ನೇ ಅನುಚ್ಛೇದದ (1)ನೇ ಖಂಡದ ಮೂಲಕ ಉದ್ದೇಶಿಸಿರುವಂತೆ ಕೆಲವು ಕಾನೂನು ಇರತಕ್ಕದ್ದು.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯಪತ್ರ (ವಿಶೇಷ ಸಂಚಿಕೆ) ಭಾಗ–IV ದಿನಾಂಕ 17.12.1956ರಲ್ಲಿ, ಸಂಖ್ಯೆ 1175ರಲ್ಲಿ ಪ್ರಕಟಿಸಲಾಗಿದೆ.)

* * *

# [1][ಕರ್ನಾಟಕ][1] ಅಧಿನಿಯಮ, 1957ರ 3

(1957ರ ಜನವರಿ ಇಪ್ಪತ್ನಾಲ್ಕನೇ ದಿನದಂದು [1][ಕರ್ನಾಟಕ ರಾಜ್ಯಪತ್ರ][1]ದಲ್ಲಿ ಮೊದಲು ಪ್ರಕಟಿಸಲಾಯಿತು.)

## [1][ಕರ್ನಾಟಕ ವಿಧಾನ ಮಂಡಲ][1] (ಏಕಕಾಲೀನ ಸದಸ್ಯತ್ವ ನಿಷೇಧ) ಅಧಿನಿಯಮ, 1956.

(1957ರ ಜನವರಿ ಹದಿನೈದನೇ ದಿನದಂದು ರಾಜ್ಯಪಾಲರ ಒಪ್ಪಿಗೆ ಪಡೆಯಲಾಗಿದೆ.)

**[1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದ ಎರಡೂ ಸದನಗಳಿಗೆ ಸದಸ್ಯನಾಗಿ ಆಯ್ಕೆಯಾದ ವ್ಯಕ್ತಿಯು ಎರಡು ಸದನಗಳಲ್ಲಿ ಯಾವುದಾದರೂ ಒಂದು ಸದನದ ತನ್ನ ಸ್ಥಾನವನ್ನು ಖಾಲಿಮಾಡಬೇಕೆಂದು ಉಪಬಂಧಿಸುವ ಅಧಿನಿಯಮ.**

ಭಾರತ ಸಂವಿಧಾನದ 190ನೇ ಅನುಚ್ಛೇದಕ್ಕೆ ಅನುಸಾರವಾಗಿ, [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದ ಎರಡೂ ಸದನಗಳ ಸದಸ್ಯನಾಗಿ ಆಯ್ಕೆಯಾಗಿರುವ ವ್ಯಕ್ತಿಯು ಎರಡು ಸದನಗಳಲ್ಲಿ ಯಾವುದಾದರೂ ಒಂದು ಸದನದ ತನ್ನ ಸ್ಥಾನವನ್ನು ಖಾಲಿ ಮಾಡಬೇಕೆಂದು ಉಪಬಂಧಿಸುವುದು ಅವಶ್ಯವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಏಳನೇ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1] ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು :-

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**1. ಚಿಕ್ಕ ಹೆಸರು.-** ಈ ಅಧಿನಿಯಮವನ್ನು [1][ಕರ್ನಾಟಕ ವಿಧಾನ ಮಂಡಲ][1] (ಏಕಕಾಲೀನ ಸದಸ್ಯತ್ವ ನಿಷೇಧ) ಅಧಿನಿಯಮ, 1956 ಎಂದು ಕರೆಯತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ವಿಷಯ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಯಾವುದಾದರೂ ಇದ್ದ ಹೊರತು,-

1. "ವಿಧಾನಸಭೆ" ಎಂದರೆ [1][ಕರ್ನಾಟಕ ರಾಜ್ಯ][1] ವಿಧಾನ ಸಭೆ ;
2. "ಪರಿಷತ್ತು" ಎಂದರೆ [1][ಕರ್ನಾಟಕ ರಾಜ್ಯ][1] ವಿಧಾನ ಪರಿಷತ್ತು ;
3. "ಸದನ" ಎಂದರೆ ವಿಧಾನ ಸಭೆ ಅಥವಾ ವಿಧಾನ ಪರಿಷತ್ತು.

**3. ವಿಧಾನಸಭೆ ಮತ್ತು ವಿಧಾನ ಪರಿಷತ್ತು - ಈ ಎರಡಕ್ಕೂ ಸದಸ್ಯರಾಗಿ ಚುನಾಯಿತರಾದಾಗ, ವ್ಯಕ್ತಿಗಳು, ಒಂದು ಸ್ಥಾನವನ್ನು ಖಾಲಿಮಾಡುವುದು.-** (1) ವಿಧಾನ ಸಭೆ ಮತ್ತು ವಿಧಾನ ಪರಿಷತ್ತು - ಈ ಎರಡಕ್ಕೂ ಸದಸ್ಯನಾಗಿ ಆಯ್ಕೆಗೊಂಡಿರುವ ಮತ್ತು ಯಾವುದೇ ಸದನದಲ್ಲಿ ತನ್ನ ಸ್ಥಾನವನ್ನು ವಹಿಸಿಕೊಳ್ಳದೇ ಇರುವ ಯಾರೇ ವ್ಯಕ್ತಿಯು, ಅವನು ತನ್ನನ್ನು ಹಾಗೆ ಆಯ್ಕೆಮಾಡಿರುವುದಾಗಿ ಘೋಷಣೆಗಳನ್ನು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಪ್ರಕಟಿಸಿದ ದಿನಾಂಕದಿಂದ ಹತ್ತು ದಿವಸಗಳೊಳಗೆ ಅಥವಾ ಪ್ರಕಟಣೆಗಳನ್ನು ಬೇರೆ ಬೇರೆ ದಿನಾಂಕಗಳಂದು ಮಾಡಲಾಗಿದ್ದರೆ ಅಂಥ ದಿನಾಂಕಗಳ ತರುವಾಯ ಹತ್ತು ದಿವಸಗಳೊಳಗೆ ಪ್ರತಿಯೊಂದು ಸದನದ ಕಾರ್ಯದರ್ಶಿಗೆ ಅಥವಾ ಈ ಬಗ್ಗೆ ರಾಜ್ಯಪಾಲರು ಅಧಿಕೃತಗೊಳಿಸಿದ ಯಾರೇ ವ್ಯಕ್ತಿಗೆ, ತಾನುಬರೆದು ಸಹಿ ಹಾಕಿ ಸಲ್ಲಿಸಿದ ನೋಟೀಸಿನ ಮೂಲಕ ಯಾವ ಸದನದಲ್ಲಿ ತಾನು ಸೇವೆ ಸಲ್ಲಿಸಲು ಇಚ್ಛಿಸುವನೋ ಅದನ್ನು ತಿಳಿಸಬಹುದು ಮತ್ತು ಆ ತರುವಾಯ ಆತ ಯಾವ ಸದನದಲ್ಲಿ ಸೇವೆ ಸಲ್ಲಿಸಲು ಇಚ್ಛಿಸುವುದಿಲ್ಲವೋ ಆ ಸದನದಲ್ಲಿ ಆತನ ಸ್ಥಾನವು ಖಾಲಿಯಾಗತಕ್ಕದ್ದು.

(2) ಮೇಲೆ ಹೇಳಿದ ಅವಧಿಯೊಳಗೆ ಅಂಥ ತಿಳಿವಳಿಕೆಯನ್ನು ಕೊಡಲು ತಪ್ಪಿದಲ್ಲಿ, ಆ ಅವಧಿಯು ಮುಕ್ತಾಯವಾದ ತರುವಾಯ ವಿಧಾನ ಪರಿಷತ್ತಿನಲ್ಲಿನ ಅವನ ಸ್ಥಾನವು ಖಾಲಿಯಾಗತಕ್ಕದ್ದು.

(3) (1)ನೇ ಉಪ-ಪ್ರಕರಣದ ಮೇರೆಗೆ ಕೊಟ್ಟ ಯಾವುದೇ ತಿಳಿವಳಿಕೆಯು ಅಂತಿಮವಾಗಿರತಕ್ಕದ್ದು ಮತ್ತು ರದ್ದುಗೊಳಿಸಲಾಗದಂತೆ ಇರತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**4. ಒಂದು ಸದನದಲ್ಲಿ ಈಗಾಗಲೇ ಸದಸ್ಯರಾಗಿರುವ ವ್ಯಕ್ತಿಗಳು ಇನ್ನೊಂದು ಸದನಕ್ಕೆ ಚುನಾಯಿತರಾದ ಮೇಲೆ ಒಂದು ಸ್ಥಾನವನ್ನು ಖಾಲಿಮಾಡುವುದು.–** (1) ಈಗಾಗಲೇ ವಿಧಾನಸಭೆಯ ಸದಸ್ಯನಾಗಿರುವ ಮತ್ತು ಆ ಸಭೆಯಲ್ಲಿ ತನ್ನ ಸ್ಥಾನವನ್ನು ವಹಿಸಿಕೊಂಡಿರುವ ವ್ಯಕ್ತಿಯು ವಿಧಾನ ಪರಿಷತ್ತಿನ ಸದಸ್ಯನಾಗಿ ಆಯ್ಕೆಗೊಂಡರೆ ವಿಧಾನಸಭೆಯಲ್ಲಿನ ಅವನ ಸ್ಥಾನವು, ಅವನನ್ನು ಹಾಗೆ ಆಯ್ಕೆಮಾಡಲಾಗಿದೆ ಎಂಬ ಘೋಷಣೆಯನ್ನು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಪ್ರಕಟಿಸಿದ ತರುವಾಯ ಖಾಲಿಯಾಗತಕ್ಕದ್ದು.

(2) ಈಗಾಗಲೇ ವಿಧಾನ ಪರಿಷತ್ತಿನ ಸದಸ್ಯನಾಗಿರುವ ಮತ್ತು ವಿಧಾನ ಪರಿಷತ್ತಿನಲ್ಲಿ ತನ್ನ ಸ್ಥಾನವನ್ನು ವಹಿಸಿಕೊಂಡಿರುವ ವ್ಯಕ್ತಿಯನ್ನು ವಿಧಾನ ಸಭೆಯ ಸದಸ್ಯನನ್ನಾಗಿ ಆಯ್ಕೆಮಾಡಿದರೆ, ವಿಧಾನ ಪರಿಷತ್ತಿನ ಅವನ ಸ್ಥಾನವು ಅವನು ಹಾಗೆ ಆಯ್ಕೆಗೊಂಡಿದ್ದಾನೆಂಬ ಘೋಷಣೆಯನ್ನು [1][ಕರ್ನಾಟಕ ರಾಜ್ಯಪತ್ರ][1] ದಲ್ಲಿ ಪ್ರಕಟಿಸಿದ ತರುವಾಯ ಖಾಲಿಯಾಗತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶದ ಮೂಲಕ 1-11-1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

* * * *

The above translation of the Karnataka Legislature (Prohibition of simultaneous membership) Act, 1956 (3 of 1957) shall be authoritative text in the Kannada Language under section 5A of the Karnataka Official Language Act, 1963 (Karnataka Act No. 26 of 1963)

Bangalore
Date:

**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಮ.ರಾ ಹೆಗಡೆ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.